E-mail : academic.pg@kud.ac.in
Website: kud.ac.in

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ –580003
KARNATAK UNIVERSITY,
Pavate Nagar, Dharwad-580 003
'A' Grade NAAC Accredited
University Potential for Excellence

Phone: (0836) 2215270

Academic (PG/Ph.D) Section
ವಿದ್ಯಾಮಂಡಳ (ಪಿಜಿ/ಪಿಎಚ್.ಡಿ)ವಿಭಾಗ

"ಚುನಾವಣಾ ಪರ್ವ ದೇಶದ ಗರ್ವ"

No.KU/Aca/P.G./Ph.D/2024-25/82 Date: 15-4-2024

## ಸುತ್ತೋಲೆ

**ವಿಷಯ:2023–24 ನೇ ಸಾಲಿನ ಸ್ನಾತಕೋತ್ತರ ಮೊದಲನೇ ಮತ್ತು ಮೂರನೇ ಸೆಮಿಸ್ಟರ್‌ಗೆ SC/ST (below2.5Lakhs)ವಿದ್ಯಾರ್ಥಿಗಳ ವಿನಾಯತಿ ಪಡೆದ ಶುಲ್ಕವನ್ನು ಮರುಭರಣ ಮಾಡುವ ಕುರಿತು.**

ಕವಿವಿಯ ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ ನಿರ್ದೇಶಕರು/ ಸಂಯೋಜಕರುಗಳು, ಸ್ನಾತಕೋತ್ತರ ಕೇಂದ್ರಗಳು (ಪಿಜಿ)ಆಡಳಿತಾಧಿಕಾರಿಗಳು ಹಾಗೂ ಕವಿವಿಯ ಅಧೀನ/ಘಟಕ ಮಹಾವಿದ್ಯಾಲಯಗಳ (PG Programme) ಪ್ರಾಚಾರ್ಯರುಗಳಿಗೆ/ ಸಂಯೋಜಕರಿಗೆ/ ನಿರ್ದೇಶಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸನ್ 2023–24ನೇ ಸಾಲಿನಲ್ಲಿ ಸ್ನಾತಕೋತ್ತರ ಮೊದಲನೇ ಮತ್ತು ಮೂರನೇ ಸೆಮಿಸ್ಟರ್‌ಗೆ ಪ್ರವೇಶ ಪಡೆದ SC/ST(below 2.5 Lakhs) ವಿದ್ಯಾರ್ಥಿಗಳಿಗೆ ಶಿಷ್ಯವೇತನವು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುತ್ತದೆಂದು ಉಪಕುಲಸಚಿವರು, ಶಿಷ್ಯವೇತನ ವಿಭಾಗ ಇವರು ಮೌಖಿಕವಾಗಿ ತಿಳಿಸಿರುತ್ತಾರೆ. ಶಿಷ್ಯವೇತನದ ಮೊತ್ತವು ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ಜಮೆಯಾಗಿರುವುದರಿಂದ ವಿದ್ಯಾರ್ಥಿಗಳಿಂದ ದಿ:24.04.2024ರೊಳಗಾಗಿ ಕವಿವಿಗೆ ಮರುಭರಣ ಮಾಡಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ. ಸದರಿ ಮರುಭರಣ ಮಾಡಿದ ಶುಲ್ಕದ ವಿವರ/ಚಲನ್ ನಂ./ದಿನಾಂಕ ವಿದ್ಯಾರ್ಥಿಗಳ ಮಾಹಿತಿಯನ್ನು ದಿ:27.04.2024ರೊಳಗಾಗಿ ವಿದ್ಯಾಮಂಡಳ ವಿಭಾಗಕ್ಕೆ ಸಲ್ಲಿಸಲು ಈ ಮೂಲಕ ತಿಳಿಯಪಡಿಸಿದೆ.

ಮುಂದುವರೆದು, ಸದರ ಶುಲ್ಕವನ್ನು ಭರಿಸದೇ ಇದ್ದಲ್ಲಿ, 2 ಮತ್ತು 4ನೇ ಸೆಮಿಸ್ಟರ್‌ಗೆ ಪ್ರವೇಶಕ್ಕೆ ಅವಕಾಶವಿರುವುದಿಲ್ಲವೆಂದು ವಿದ್ಯಾರ್ಥಿಗಳ ಗಮನಕ್ಕೆ ತರಲು ಈ ಮೂಲಕ ಕೋರಲಾಗಿದೆ.

A. Channappa
ಕುಲಸಚಿವರು

ಗೆ,

1. ಅಧ್ಯಕ್ಷರುಗಳು/ನಿರ್ದೇಶಕರು/ಸಂಯೋಜಕರು ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕ.ವಿ.ವಿ ಧಾರವಾಡ.
2. ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಗದಗ/ಕಾರವಾರ/ಹಾವೇರಿ.
3. ಪ್ರಾಚಾರ್ಯರು, ಕರ್ನಾಟಕ ಕಲಾ/ವಾಣಿಜ್ಯ/ವಿಜ್ಞಾನ/ ಮಹಾವಿದ್ಯಾಲಯ, ಧಾರವಾಡ(ಪಿಜಿ ಕೋರ್ಸುಗಳು).
4. ಸಂಯೋಜಕರು, ಎಂ.ಟಿ.ಟಿ.ಎಂ. ಅಧ್ಯಯನ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
5. ಪ್ರಾಚಾರ್ಯರುಗಳು, ಸ್ನಾತಕೋತ್ತರ ಕೋರ್ಸಗಳು ನಡೆಸುವ ಎಲ್ಲ ಅಧೀನ/ಸಂಯೋಜಿತ ಮಮಹಾವಿದ್ಯಾಲಯಗಳು, ಕ.ವಿ.ವಿ.ಧಾರವಾಡ.

ಪ್ರತಿ ಸಾದರಪೂರ್ವಕವಾಗಿ:

1. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕ.ವಿ.ವಿ.ಧಾರವಾಡ.
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ. ಧಾರವಾಡ.
3. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ. ಧಾರವಾಡ.